
ಕೆ. ಶ್ರೀನಿವಾಸ, ಬೆಂಗಳೂರು
ರೂಪಾಯಿ ಎದುರು ಡಾಲರ್ ಮೌಲ್ಯ ಕುಸಿತ ಯಾವಾಗ?



ಟ್ರಂಪ್ ಈಗ ಆಡುತ್ತಿರುವಂತೆಯೇ ಮುಂದೆಯೂ ಮುಂದುವರಿಸಿದಾಗ.

ಜಯಶ್ರೀ, ಬೆಂಗಳೂರು
ತುಂಬಿದ ಕೊಡ ತುಳುಕುವುದಿಲ್ಲ. ಪಾಪವೇ ತುಂಬಿದ ಕೊಡ...?
ಯಾವುದಕ್ಕೂ ಅಳುಕುವುದಿಲ್ಲ.

ರಾಮಸ್ವಾಮಿ, ಭೀಮನಕಟ್ಟೆ
ಅಡುಗೆ ಮಾಡುವುದರಲ್ಲಿ ನಳ, ಭೀಮರಲ್ಲಿ ಯಾರು ಶ್ರೇಷ್ಠರು?
ಭೀಮನೇ. 'ನಳಪಾಕ'ದಲ್ಲಿ ನೀರಿನ ಅಂಶ ಹೆಚ್ಚಾಗಿ ರುಚಿ ಕಡಿಮೆಯಾಗುವುದಂತೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಚಳಿಗಾಲದಲ್ಲಿ ಸೊಳ್ಳೆಗಳು ಕಡಿಮೆಯಾಗುವಂತೆ ಬೇಸಿಗೆಯಲ್ಲೂ ಆಗುವಂತಿದ್ದರೆ ಚೆನ್ನಿತ್ತಲ್ಲವೆ?



ಬೇಸಿಗೆಯಂತೆ ಚಳಿಗಾಲದಲ್ಲೂ ಕಚ್ಚಲು ಹೆಚ್ಚು ಮೈ ಸಿಕ್ಕರೆ ಚೆನ್ನಿತ್ತು ಎಂದಿತಂತೆ ಸೊಳ್ಳೆ.

ಅನಸೂಯಾ ಟಿ, ಕೇದಿಗೆಮನೆ
ಬೇಡದ ವಿಚಾರಗಳನ್ನು ಸುಲಭವಾಗಿ ತಲೆಯಿಂದ ತೆಗೆದುಹಾಕುವುದು ಹೇಗೆ?
ಬೇಕಾದ ವಿಚಾರಗಳನ್ನು ಬಲವಂತವಾಗಿ ಆ ಜಾಗದಲ್ಲಿ ತುಂಬಿಸಿಕೊಂಡು.

ವಾಣಿ, ಮೈಸೂರು
ಅವರು ಬೇಕು ಎಂದು ಹೊಂದಾಣಿಕೆ ಎಲ್ಲಿಯವರೆಗೆ ಸಾಧ್ಯ?
ಅವರು ಇಲ್ಲದಿದ್ದರೂ ನಡೆಯುತ್ತದೆ ಎಂಬ ತಿಳಿವಳಿಕೆ ಬರುವವರೆಗೆ.

ಎಂ.ಜಿ. ಉಮಾ, ಬಳ್ಳಾರಿ
ಹೆಂಗಸರು ವಯಸ್ಸನ್ನು ಮಾತ್ರ ಮುಚ್ಚಿಡುತ್ತಾರೆ. ಗಂಡಸರು?
ಚಿಕ್ಕವರಂತೆ ಕಾಣುವ ಆ ಹೆಣ್ಣುಗಳ ಬಗ್ಗೆ ತಮಗಿರುವ ಅನಿಸಿಕೆಗಳನ್ನು.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ದೇಹಕ್ಕೆ ಬ್ಲಡ್, ಆಲೋಚನೆಗೆ ಹೆಡ್ ಬೇಕು. ಮಂತ್ರಿಯಾಗಲು?
ನಂಬಿ ಮತ ನೀಡುವ ಹೆಡ್ಡ ಸಾಕು.

ಮಹಾವೀರ ಕಾಸರ, ಶಿವಮೊಗ್ಗ
ಕೆಲವರು ತಂದೆತಾಯಿ ದೇವರು ಎಂದರೆ ಕೆಲವರು ಮಕ್ಕಳು ದೇವರು ಎನ್ನುವರಲ್ಲ?
ಕಣ್ಣಿಗೆ ಕಾಣದೆ ಹತೋಟಿ ಸಾಧಿಸುವ ಎಲ್ಲವೂ ವೈರಸ್ ಅಥವಾ ದೇವರೇ!

ಮಂಡಿ ಕುಮಾರ್, ಬೆಂಗಳೂರು
ಗಂಡು ಹೆಣ್ಣಿನ ಪ್ರೀತಿ ಹುಟ್ಟಿದ್ದು ಹೇಗೆ?
ದುಡಿತಕ್ಕೆ ಅವನು, ತುಡಿತಕ್ಕೆ ಅವಳು ಸ್ಪಂದಿಸಿದಾಗ.

ಎಂ.ಸಿ. ಧನ್ಯತಾ, ಬೆಂಗಳೂರು
ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂದರೇನರ್ಥ?
ಲಂಚ. ಅದಿಲ್ಲದೆ ಆಟವಿಲ್ಲ, ಅದರ ಲೆಕ್ಕ ಎಲ್ಲೂ ಇಲ್ಲ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಸುದ್ದಿವಾಹಿನಿಗಳಿಗೆ ರಜೆ ಏಕಿಲ್ಲ?
ಸುದ್ದಿವಾಹಿನಿ ನಿತ್ಯಜೀವನದ ಹೃದಯ. ಹೃದಯಕ್ಕೆ ರಜೆ ಹಾಕಲು ಅನುಮತಿಯಿಲ್ಲ.

ಎಲ್ಐಸಿ ವಿಜೇಂದ್ರ, ಮೈಸೂರು
ಕುಂಭಮೇಳದಲ್ಲಿ ಗಣ್ಯರು ಸ್ನಾನ ಮಾಡುತ್ತಿರುವ ಫೋಟೊವನ್ನು ಮಾಧ್ಯಮಗಳು ಹಾಕುವ ಉದ್ದೇಶ?
'ಅವನೊಬ್ಬ ಕೊಳಕ' ಎಂಬುದು ಅಂದಿನ ಮಟ್ಟಿಗೆ ಸುಳ್ಳೆಂದು ತೋರಿಸಲು.

ಎನ್.ವಿ. ಭಟ್, ಶಿವಮೊಗ್ಗ
ಅರ್ಧಚಂದ್ರ ಪ್ರಯೋಗ ಎಂದರೇನು?
ಅಮಾವಾಸ್ಯೆಯತ್ತ ತಳ್ಳುವ ಪ್ರಯತ್ನ.

## ಬಹುಮಾನಿತ ಪ್ರಶ್ನೆ

ಬಿ. ಬಸವರಾಜ್, ಹರಿಹರ
ಖುಷಿಯಾದುದನ್ನು 'ಹಾಲು ಕುಡಿದಷ್ಟು ಖುಷಿಯಾಯಿತು' ಎನ್ನುವುದೇಕೆ?
ಮಗುವು ಅಮ್ಮನ ಹಾಲು ಕುಡಿಯುವಾಗಿನ ಖುಷಿಗಿಂತ ಮಿಗಿಲಾದುದು ಜಗದೊಳಿಲ್ಲ.

ಕಾವ್ಯಶ್ರೀ, ಶೋರಾಪುರ
ನಂಬಲಾಗದ ಸತ್ಯ, ನುಂಗಲಾರದ ತುತ್ತು ಯಾವುದು?
ನಂಬಲಾಗದ ಸತ್ಯ ಆಪ್ತರು ಮಾಡುವ ದ್ರೋಹ; ನುಂಗಲಾರದ ತುತ್ತು ಟ್ರಂಪ್.

ಬಿ.ಆರ್. ಉಷಾ, ಬೆಂಗಳೂರು
ವ್ಯಾನಿಟಿ ಬ್ಯಾಗ್ ಏಕೆ?
ಬೇಕೇಬೇಕಲ್ಲ! ಅದೊಂದು ನಿತ್ಯವಸ್ತು ಸಂಗ್ರಹಾಲಯ!

ಅಮರಯ್ಯಾ ಪತ್ರಿಮಠ, ಸುರಪುರ
ಮುಂಗೋಪಕ್ಕೆ ಕಾರಣವೇನು?



ವಿವೇಕದ ಗೈರುಹಾಜರಿ.

ಮಲ್ಲಿಕಾರ್ಜುನ, ಸುರಧೇನುಪುರ
ಮಹಾನ್ ವ್ಯಕ್ತಿಗಳು ಸತ್ತರೆ ರಜೆ ಅಷ್ಟೇ ಸಾಕೆ?
ಉಂಟೇ! ದುಃಖ ಮರೆಯಲು 'ಮದ್ಯಂತರ' ವ್ಯವಸ್ಥೆಯೂ ಇರಬೇಕು.

ಜಿ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಸಾವಿಗೇಕೆ ಜಾಮೀನು ಕೊಡುವವರಿಲ್ಲ?
ಸಾವು Non bailable offence ಅಂತೆ.

ಪಿ.ಜೆ. ರಾಘವೇಂದ್ರ, ಮೈಸೂರು
ದ್ವಾಪರದಲ್ಲಿ ಪ್ರಶ್ನಿಸಿದ್ದು ಓರ್ವ ಯಕ್ಷ. ಈಗ ನೂರಾರು ಯಕ್ಷರು. ಧರ್ಮಜನ ಗತಿ?
'ನೋ ಪ್ರಾಬ್ಲಮ್. ಚಾಟ್‌ಜಿಪಿಟಿ ಬಳಸುತ್ತೇನೆ' ಎಂದನಂತೆ ಧರ್ಮಜ.

■ ರಾಮ್